



ಒಂದು ಸಿನಿಮಾ, ಅದು ರೂಪುಗೊಂಡ ನೆಲದ ಗುಣವನ್ನು ಬಿಂಬಿಸುವುದಷ್ಟೇ ಅಲ್ಲ, ಅಲ್ಲಿನ ಸಾಮಾನ್ಯ ಜನರ ಅಸಾಮಾನ್ಯ ಕನಸುಗಳನ್ನು ತೆರೆಯ ಮೇಲೆ ಸಾಕ್ಷಾತ್ಕರಿಸುತ್ತದೆ. ಹಾಗಾಗಿಯೇ ನಮ್ಮ ಸಮಾಜದ ಎಲ್ಲ ವರ್ಗದ, ಎಲ್ಲ ಮನಸ್ಥಿತಿಯ ಜನರನ್ನೂ ಸಿನಿಮಾ ಬೇರೆ ಬೇರೆ ರೀತಿಗಳಲ್ಲಿ ಸೆಳೆಯುತ್ತಲೇ ಇರುತ್ತದೆ. ಸಿನಿಮಾ ಎಂಬ ಅಶ್ವತ್ಥವೃಕ್ಷದ ಅಸಂಖ್ಯಾತ ಬಿಳಲುಗಳನ್ನು ದರ್ಶಿಸುವ ಪ್ರಯತ್ನ ಇಲ್ಲಿದೆ.

■ ಮಾಸ್ತಿ



‘ನೋಡಕ್ಕೆ ಒಳ್ಳೆ ಸಿನಿಮಾ ಹೀರೊ ಇದ್ದಂಗವ್ನೆ’, ‘ನಿನ್ನೆ ಒಂದು ಸಿನಿಮಾ ನೋಡ್ದೆ, ಸಕ್ಕತ್ತಾಗಿದೆ’, ‘ತಲೆಕೆಟ್ಟೋಗಿತ್ತು, ಅದ್ಕೆ ಸಿನಿಮಾಗೋಗಿದ್ದೆ’, ‘ಯಾಕಾದ್ರೂ ಸಿನಿಮಾಗೋದ್ನೋ, ತಲೆ ಕೆಟ್ಟೋಯ್ತು’, ‘ಸಿನಿಮಾಗಳಲ್ಲಿ ನಡಿಯಲ್ವಾ? ಹಂಗ್ ನಡೀತು’... ಹೀಗೆ ನಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ, ಮಾತುಗಳಲ್ಲಿ, ಭೇಟಿಗಳಲ್ಲಿ ಸಿನಿಮಾ ಬಂದು ಹೋಗ್ತಿರುತ್ತೆ. ಸಣ್ಣ ವಯಸ್ಸಿಂದ ಸಿನಿಮಾ ಜೊತೆ ನಾವು, ನಮ್ ಜೊತೆ ಸಿನಿಮಾನೂ ಬೆಳೀತಾ ಬಂದಿದೆ.

ಸಿನಿಮಾ ಬೆಳವಣಿಗೆಯನ್ನು ತಾಂತ್ರಿಕವಾಗಿ ನೋಡಿದಾಗ, ಬ್ಲ್ಯಾಕ್ ಆ್ಯಂಡ್ ವೈಟ್‌ನಿಂದ ಈಸ್ಟ್‌ಮನ್ ಕಲರ್‌ಗೆ, ನಂತರ ಕಲರ್‌ಗೆ ಬಂತು. ಒಂದಷ್ಟೊತ್ತು ಕಾಲ ಅದ್ಯಾವುದೇ ಭಾಷೆಯದ್ದಾಗಿರಲಿ, ಮಾತು ಅರ್ಥವಾಗಲೀ ಬಿಡಲಿ, ನಮ್ಮನ್ನು ಮರೆಸಿ ಆವರಿಸಿಕೊಂಡು ಅಳಿಸಿ ನಗಿಸಿ ಕಾಡಿಸಿ ಕೆರಳಿಸಿ ಮನಸ್ಸಿನಲ್ಲಿ ಗಟ್ಟಿಯಾಗಿ ಕೂತುಬಿಡುತ್ತದೆ.

ಟೆಂಟಿನಲ್ಲಿ, ಥಿಯೇಟರ್‌ನಲ್ಲಿ, ಡ್ರೈವಿನ್ ಥಿಯೇಟರ್‌ಗಳಲ್ಲಿ, ಬ್ಲ್ಯಾಕ್ ಅಂಡ್ ವೈಟ್, ಕಲರ್ ಟೀವಿಗಳಲ್ಲಿ ಕಾಣಸಿಗುತ್ತಿದ್ದ ಸಿನಿಮಾ ಬರುಬರುತ್ತಾ ವಿಸಿಪಿ, ವಿಸಿಆರ್‌ನ ವಿಹೆಚ್‌ಎಸ್ ಕ್ಯಾಸೆಟ್‌ಗಳಲ್ಲಿ, ಸಿಡಿ ಪ್ಲೇಯರ್‌ಗಳಲ್ಲಿ, ಪೆನ್ ಡ್ರೈವ್‌ಗಳಲ್ಲಿ, ಮೈಕ್ರೋ ಚಿಪ್‌ಗಳಲ್ಲಿ, ಕಾರು, ಬಸ್ಸು, ಟಿ ಟಿ, ವಿಮಾನದ ಸೀಟಿನಲ್ಲಿ, ಮಲ್ಟಿಪ್ಲೆಕ್ಸ್‌ಗಳಲ್ಲಿ ಹೀಗೆ ವಿಸ್ತಾರವಾಗಿ ಬೆಳೆಯುತ್ತಲೇ ಹೋಗಿದೆ.

‘ಒಂದ್ ಕಡೆ ಇರಲ್ಲ, ಕಾಲಿಗೆ ಚಕ್ರ ಕಟ್ಕೊಂಡು ಓಡಾಡ್ತಾನೆ’, ‘ಮೂರೊತ್ತು ಬ್ಯುಸಿನೆಸ್ಸು ಅಂತ ತಲೆಕೆಡಸ್ಕೊಂಡು ಓಡಾಡ್ತಾನೆ’, ‘ಅಯ್ಯೋ ಅವನು ಎಲ್ಲಿ ಸಿಗ್ತಾನೆ?’ ಅಂತೆಲ್ಲ ಬೈಸಿಕೊಳ್ಳುವವರನ್ನೂ ಸಿನಿಮಾ ಅನ್ನೋ ಮಾಯೆ ಎರಡೂವರೆ ತಾಸು ಒಂದು ಕಡೆ ಸಂಯಮದಿಂದ ಕೂರಿಸುತ್ತೆ. ವೈದ್ಯ, ರೋಗಿ, ಜ್ಞಾನಿ, ವಿಜ್ಞಾನಿ, ಡ್ರೈವರು, ಕಂಡಕ್ಟರ್ರು, ಪ್ಲಂಬರ್ರು, ಪೈಂಟರ್ರು, ಓನರ್ರು, ಕ್ಲೀನರ್ರು, ಎಲೆಕ್ಟ್ರಿಷಿಯನ್, ಮ್ಯೂಜಿಷಿಯನ್, ಎಂಜಿನಿಯರ್ರು, ಆರ್ಕಿಟೆಕ್ಟು, ಕಳ್ಳ, ಪೊಲೀಸು, ಆಚಾರಿ, ಬ್ರಹ್ಮಚಾರಿ, ಅಳಿಯ, ಮಾವ, ಅತ್ತೆ, ಸೊಸೆ, ಅಣ್ಣ, ತಮ್ಮ, ಪತಿವ್ರತೆ, ವೇಶ್ಯೆ... ಹೀಗೆ ಸಮಾಜದ ಎಲ್ಲರನ್ನೂ ಭೇದ ಭಾವವಿಲ್ಲದೇ ಒಂದು ಕಡೆ ಕೂರಿಸುವಂತಹ ಶಕ್ತಿ ಸಿನಿಮಾಗಿದೆ.

ಕಂಡಕ್ಟರ್ ಆಗಿದ್ದವರನ್ನು ಸೂಪರ್ ಸ್ಟಾರ್ ಮಾಡುತ್ತದೆ; ಸಾಮಾನ್ಯ ಹುಡುಗಿಯನ್ನು ರಾತ್ರೋರಾತ್ರಿ ದೇವತೆಯಾಗಿಸಿ, ಬೆಳಿಗ್ಗೆ ಅಭಿಮಾನಿಗಳಿಂದ ದೇವಸ್ಥಾನ ಕಟ್ಟಿಸಿಕೊಳ್ಳುವಂತೆ ಮಾಡುತ್ತೆ. ನಟರಾಗಿದ್ದವರು ಒಂದು ರಾಜ್ಯದ ಮುಖ್ಯಮಂತ್ರಿಯಾಗುತ್ತಾರೆಂದರೆ ಸಿನಿಮಾ ಜನರ ಮೇಲೆ ಎಷ್ಟು ಗಾಢ ಪರಿಣಾಮ ಬೀರಿರಬಹುದು ಯೋಚನೆ ಮಾಡಿ. ಒಂದೊಳ್ಳೆ ಸಿನಿಮಾ ಒಂದು ಬದುಕನ್ನು ಕಟ್ಟಿಕೊಡಬಹುದು. ಅದೇ ಒಂದು ಕೆಟ್ಟ ಸಿನಿಮಾ ಬದುಕನ್ನು ಹಾಳುಮಾಡುತ್ತದೆ. ಲಕ್ಷಾಂತರ ಪ್ರೇಮವಿವಾಹಗಳಿಗೆ ಸಿನಿಮಾಗಳು ಕಾರಣವಾಗಿವೆ. ಒಡೆದ ಮನಸ್ಸುಗಳನ್ನು – ಮನೆಗಳನ್ನು ಒಂದು ಮಾಡಿಸಿದ ಹಿರಿಮೆ ಸಿನಿಮಾಗಿದೆ.

ಹಿಂದೆಲ್ಲ ಸಿನಿಮಾ ಮಂದಿರಗಳ ಹೆಸರನ್ನು ಬಸ್ಸು ನಿಲ್ದಾಣಗಳಿಗಿಡುತ್ತಿದ್ದರು. ಈಗಲೂ ಕೆಲವೊಂದು ಬಸ್‌ಸ್ಟ್ಯಾಂಡ್‌ಗಳು ಅದೇ ಹೆಸರನ್ನು ಉಳಿಸಿಕೊಂಡಿವೆ. ಸುಜಾತ, ನವರಂಗ್, ಗೀತಾಂಜಲಿ, ಕಾಮಾಕ್ಯ, ನಂದಾ, ಆದರ್ಶ, ಗೋವರ್ಧನ್ ಇತ್ಯಾದಿ... ಹಿಂದೆ ಎಷ್ಟೋ ಸಿನಿಮಾಗಳು ಎಷ್ಟು ಪ್ರಭಾವಶಾಲಿಯಾಗಿರುತ್ತಿದ್ದವೆಂದರೆ ಸಿನಿಮಾ ರಿಲೀಸ್ ಸಂದರ್ಭದಲ್ಲಿ ಚಿತ್ರರಸಿಕರನ್ನು ನಿಭಾಯಿಸುವುದೇ ಸಮಸ್ಯೆಯಾಗಿಬಿಡುತ್ತಿತ್ತು. ರಾಜ್‌ಕುಮಾರ್ ಸಿನಿಮಾಕ್ಕೆ ರೇಸ್‌ಕೋರ್ಸಿನಲ್ಲಿ ಲೈನ್ ಮಾಡಿಸಿ ಟಿಕೆಟ್ ಮಾರಿದ ಉದಾಹರಣೆ ಇದೆ. ಸಿನಿಮಾ ಟಿಕೆಟ್ಟನ್ನು ಕಾಳಸಂತೆಯಲ್ಲಿ ಮಾರುವವನು, ಅಂದ್ರೆ ಬ್ಲ್ಯಾಕ್ ಟಿಕೆಟ್ ಮಾರಾಟ ಮಾಡುವವನು ಅದೇ ದುಡ್ಡಿನಲ್ಲಿ ಬೆಂಗಳೂರಿನಂಥ ಮಹಾನಗರದಲ್ಲಿ ಸೈಟ್ ತಗೊಂಡು, ಸ್ವಂತಮನೆ ಕಟ್ಟಿಕೊಂಡಿರುವ ಉದಾಹರಣೆಯಿದೆ. ಅದೇ ತರಹ ಕೆಟ್ಟ ಸಿನಿಮಾ ನಿರ್ಮಿಸಿ, ಸೋತು ಕಂಗೆಟ್ಟು ಮನೆಮಾರಿಕೊಂಡವರ ನಿದರ್ಶನಗಳೂ ಕಮ್ಮಿಯೇನಿಲ್ಲ.

ಸಿನಿಮಾ ನೋಡುಗರಿಗೆ ಮಾಧ್ಯಮವಾದರೆ ತಯಾರಕರಿಗೆ ಉದ್ಯಮ. ಈ ಉದ್ಯಮದಲ್ಲಿ ಏನೇನಿದೆ ಅಂತ ಹುಡುಕಿದರೆ ಎಲ್ಲವೂ ಇದೆ. ವೃತ್ತಿಪರತೆ, ವೃತ್ತಿವೈಷಮ್ಯ, ಸ್ಪರ್ಧೆ, ಸೋಲು, ಗೆಲುವು, ಪ್ರಯತ್ನ, ಸಾಧನೆ, ಶೋಧನೆ, ಅರ್ಥ, ಸ್ವಾರ್ಥ, ಕಾಯುವಿಕೆ, ಅವಮಾನ, ಬಹುಮಾನ, ಲಾಭ, ನಷ್ಟ ಜೊತೆಗೆ ಅಭಿಮಾನದ ಪರಾಕಾಷ್ಠೆ... ಒಂದಾ ಎರಡಾ? ಸಿನಿಮಾ ಕಣ್ಣಿಗೆ ಕಾಣುವ ವಿಶಾಲವಾದ ಮರವಾದರೆ ಅದರ ಕಾಣದ ಬೇರುಗಳು ಇನ್ನೂ ವಿಸ್ತಾರವಾಗಿ ಬೇರೂರಿದೆ.

ಸಿನಿಮಾಗೆ ಸಬ್ಸಿಡಿ, ಡಿಜಿಟಲ್ ಹಕ್ಕುಗಳೆಂಬ ಆಪ್ತಮಿತ್ರರೂ ಹಾಗೂ ಪೈರೆಸಿಯೆಂಬ ದುಷ್ಟ ಶತ್ರುವೂ ಇದ್ದಾನೆ. ಹಿಂದೆ ‘ಸಿನಿಮಾ ಸೇರಿ ಹಾಳಾಗ್ಬಿಟ್ಟ’ ಅನ್ನೋ ಮಾತಿತ್ತು. ಈಗ ಕಾಲ ಬದಲಾಗಿದೆ. ಎಂಜಿನಿಯರ್‌ಗಳು, ಪದವೀಧರರು, ಮಾಸ್ಟರ್ ಡಿಗ್ರಿ ಮಾಡಿರುವ ವಿದ್ಯಾವಂತರು, ಸಿನಿಮಾ ಕ್ಷೇತ್ರಕ್ಕೆ ದಾಂಗುಡಿಯಿಟ್ಟಿದ್ದಾರೆ. ಪ್ರವೃತ್ತಿಯಾಗಿದ್ದ ಸಿನಿಮಾ ವೃತ್ತಿಯಾಗತೊಡಗಿದೆ.

ನಿರ್ಮಾಪಕ ದಕ್ಷಿಣ ಕನ್ನಡದವನು, ನಿರ್ದೇಶಕ ಉತ್ತರ ಕರ್ನಾಟಕದವನು, ನಾಯಕ ಮೈಸೂರು ಪ್ರಾಂತ್ಯದವನು, ಹೀರೊಯಿನ್ ಮತ್ತೊಂದು ಕಡೆಯವಳು... ಹೀಗೆ ನಾನಾ ಭಾಗದವರನ್ನು ಜಾತಿ, ಮತ, ಆಸ್ತಿ, ಅಂತಸ್ತು ಕೇಳದೆ ಸಮಾನ ಮನಸ್ಕರ ರೀತಿಯಲ್ಲಿ ಒಗ್ಗೂಡಿಸಿ ದುಡಿಸಿಕೊಳ್ಳುತ್ತದೆ ಸಿನಿಮಾ.

ತನ್ನನ್ನು ತಾನು ಬುದ್ಧಿವಂತನೆನಿಸಿಕೊಳ್ಳುವ ಪ್ರೇಕ್ಷಕ, ಅವನ ಆಲೋಚನೆಯನ್ನೇ ಯಾಮಾರಿಸುವ ನಿರ್ದೇಶಕ, ನಟನೆ– ನೃತ್ಯ– ಸಾಹಸದಿಂದ ರಂಗೇರಿಸುವ ತಾರಾಗಣ, ಶುದ್ಧವಾದ ಸಂಗೀತ ಕೊಟ್ಟು ಸೈ ಎನಿಸಿಕೊಳ್ಳುವ ಸಂಗೀತ ನಿರ್ದೇಶಕ ಹೀಗೆ ಎಲ್ಲರೂ ಸೇರಿ ಒಂದು ಸಿನಿಮಾ ಜೀವ ಪಡೆದುಕೊಳ್ಳುತ್ತದೆ. ಸಿನಿಮಾ ಒಬ್ಬನ ಕೃತಿಯಲ್ಲ; ಅದೊಂದು ತಂಡದ ಕಲಾಕೃತಿ. ಈ ಕಲಾಕೃತಿ ನಮ್ಮ ಸಂಸ್ಕೃತಿಯ ಹೊಕ್ಕಳುಬಳ್ಳಿಯೂ ಹೌದು. ■